ನಾನು ನನ್ನ ಹೆಂಡತಿ ಇಬ್ಬರೇ, ಮಗಳ ಮದುವೆಯಾದ ಮೇಲೆ ಒಂದು ಸಣ್ಣ ಮನೆ ಕಟ್ಟಿಸಿಕೊಂಡರಾಯಿತು ಎಂದು ಯೋಚಿಸಿ ಬಾಡಿಗೆ ಮನೆಯಲ್ಲಿಯೇ ಕಾಲ ಹಾಕುತ್ತಿದ್ದ.

ಲಕ್ಷ್ಮಿ ಕೇಶವರಿಗೆ ಸುನಂದಾ ಹೊಂದಿಕೊಂಡ ಮೇಲೆ ಪ್ರತಿವರ್ಷವೂ ಅವಳನ್ನು ಕರೆದುಕೊಂಡು ಅವರು ಊರಿನ ಪಟ್ಟಲದಮ್ಮನ ಜಾತ್ರೆಗೆ ಹೋಗುತ್ತಿದ್ದರು. ಸುನಂದಾಳ ಮನಸ್ಸಿನಲ್ಲಿ ತನ್ನ ಅವ್ವ ಅಪ್ಪನನ್ನು, ಅಕ್ಕಂದಿರನ್ನು, ತಮ್ಮನನ್ನು ಕಂಡು ಯಾವುದೇ ತರಹದ ಪ್ರೀತಿವಾತ್ಸಲ್ಯದ ಭಾವನೆಗಳು ಉದಯವಾಗುತ್ತಿರಲಿಲ್ಲ. ಅವರೇ ಎಲ್ಲರೂ ಅವಳನ್ನು ಮುಗಿಬಿದ್ದು ಮಾತನಾಡಿಸುತ್ತಿದ್ದುದರಿಂದ ಅವರೊಡನೆ ಮಾತನಾಡುತ್ತಿದ್ದಳು. ಒಂದೆರಡು ದಿನ ಇದ್ದು ಹೋಗುವಿಯಂತೆ ಎಂದು ಸಂಪಿಗಮ್ಮ ಅಲವತ್ತುಕೊಂಡರೂ ಕೇಳದೆ ತನ್ನ ಮಮ್ಮಿ ಡ್ಯಾಡಿಯೊಂದಿಗೆ ಹೊರಟು ನಿಲ್ಲುತ್ತಿದ್ದಳು. ಲಕ್ಷ್ಮಿಯೂ ಸುನಂದಾಳನ್ನು ಒಂದು ದಿನವೂ ಬಿಟ್ಟಿರುವುದು ನನ್ನಿಂದ ಆಗುವುದಿಲ್ಲ ಎಂದು ಸಂಪಿಗಮ್ಮನ ಬಳಿ ನೇರವಾಗಿ ಮುಗುಳ್ನಗುತ್ತಲೇ ತಿಳಿಸುತ್ತಿದ್ದಳು. ಸಂಪಿಗಮ್ಮನಿಗೆ ತನ್ನ ಎದೆಯಲ್ಲಿ ಏನೋ ಚುಚ್ಚಿದಂತಾದರೂ ನನ್ನ ಮೂಗು, ಕಣ್ಣು, ಬಣ್ಣಗಳನ್ನೇ ಹೊತ್ತುಕೊಂಡು ಎತ್ತರವಾಗಿ ಬೆಳೆದಿರುವ ನನ್ನ ಮಗಳು ಮೈದುನ ವಾರಗಿತ್ತಿಯರ ಬಳಿ ಸುಖವಾಗಿದ್ದಾಳೆ ಎಂಬುದನ್ನು ಅರಿತು ನಗುನಗುತ್ತಲೇ ಕಳುಹಿಸಿಕೊಡುತ್ತಿದ್ದಳು.

ಹೀಗಿರುವಾಗ ಸುನಂದಾ ಎಂಬ ಸುಂದರ ಬಾಲೆಯ ಬದುಕಿನ ಮೇಲೆ ವಿಧಿಯ ಕರಿನೆರಳು ಹರಡಿಕೊಳ್ಳತೊಡಗಿತು!

ಲಕ್ಷ್ಮಿಕೇಶವರ ಮಗಳಾಗಿ ಸುನಂದಾ ಬಂದು ಒಂಬತ್ತು ವರ್ಷಗಳು ಕಳೆದಿದ್ದವು. ಅವಳು ಆರನೆಯ ತರಗತಿಯ ಮುಂಬರುವ ಪರೀಕ್ಷೆಗಾಗಿ ತಯಾರಾಗುತ್ತಿದ್ದಳು. ಲಕ್ಷ್ಮಿಯೂ ಮಗಳಿಗೆ ಒತ್ತಾಸೆಯಾಗಿ ನಿಂತು ಚೆನ್ನಾಗಿ ಓದಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿ ಪಾಸಾಗಬೇಕೆಂದು ಹೇಳುತ್ತಾ ಪ್ರೋತ್ಸಾಹಿಸುತ್ತಿದ್ದಳು. ಅದೊಂದು ದಿನ ಲಕ್ಷ್ಮಿಗೆ ತನ್ನ ಋತುಚಕ್ರದಲ್ಲಿ ಏನೋ ಬದಲಾವಣೆಯಾಗಿ ನಿಂತು ಹೋಗಿರುವುದನ್ನು ಗಮನಿಸಿ ಆಶ್ಚರ್ಯ, ಕುತೂಹಲ ಎರಡೂ ಒಟ್ಟಿಗೆ ಆದವು. ರಾತ್ರಿ ಹಾಸಿಗೆಯಲ್ಲಿ ಮಲಗಿದಾಗ ಗಂಡನ ಬಳಿ ಈ ವಿಷಯವನ್ನು ತುಸು ನಾಚಿಕೆಯಿಂದಲೇ ಹೇಳಿಕೊಂಡಳು. ಕೇಶವನಿಗೆ ನಗು ಬಂದಿತು. ಮದುವೆಯಾಗಿ ಹದಿನಾಲ್ಕು ವರ್ಷಗಳಾದ ಮೇಲೆ ತನ್ನ ಹೆಂಡತಿ ಗರ್ಭಿಣಿಯಾಗಲು ಸಾಧ್ಯವೇ ಇಲ್ಲ. ಏನೋ ದೈಹಿಕ ತೊದರೆಯಿರಬಹುದು  ಎಂದುಕೊಂಡು ಏನಾದರೂ ಆಗಿರಲಿ ನಾಳೆ ವೈದ್ಯರನ್ನು ಕಂಡುಬರೋಣ ಎಂದು ಹೇಳಿ ಹೆಚ್ಚು ಯೋಚಿಸದೆ ಮಲಗಿಕೊಂಡ.

ಮರುದಿನ ಸಂಜೆ ಸುನಂದಾಳನ್ನು ಮನೆಯಲ್ಲಿ ಬಿಟ್ಟು, ಮಮ್ಮಿಗೆ ಹುಷಾರಿಲ್ಲ ಡಾಕ್ಟರರ ಹತ್ತಿರ ತೋರಿಸಿಕೊಂಡು ಬರುತ್ತೇನೆ ಎಂದು ಲಕ್ಷ್ಮಿಯನ್ನು ತಮ್ಮ ಕುಟುಂಬ ವೈದ್ಯರ ಬಳಿ ಕರೆದುಕೊಂಡು ಹೋದ. ವೈದ್ಯರು ಲಕ್ಷ್ಮಿಯನ್ನು ಪರೀಕ್ಷಿಸಿ ನೀವು ತಾಯಿಯಾಗಲಿದ್ದೀರಿ ಎಂದು ಮುಗುಳ್ನಕ್ಕಾಗ ಲಕ್ಷ್ಮಿ ಕೇಶವರಿಗೆ ತಮ್ಮ ಕಿವಿಗಳನ್ನು ತಾವೇ ನಂಬಲಾಗಲಿಲ್ಲ. ಇದು ಕನಸೋ, ನನಸೋ ಎಂದು ಇಬ್ಬರಿಗೂ ಗೊಂದಲವಾಯಿತು. ಅದೇ ಗೊಂದಲದಲ್ಲಿ ಮನೆಗೆ ಬಂದವರನ್ನು ಸುನಂದಾ 'ಮಮ್ಮೀ... ನೀನು ಹುಷಾರಾಗಿದೀಯಾ ಮಮ್ಮೀ... ಡಾಕ್ಟರ್ ಏನು ಹೇಳಿದರು...' ಎಂದು ಅಲವತ್ತುಕೊಂಡಾಗ ಲಕ್ಷ್ಮಿ, 'ನಿನಗೆ ತಮ್ಮನೋ, ತಂಗಿಯೋ ಬರುತ್ತಾಳೆ ಪುಟ್ಟೀ...' ಎಂದು ನಗುತ್ತಲೇ ತಿಳಿಸಿದಳು. ಅದನ್ನು ಕೇಳಿದ ಸುನಂದಾ 'ವಾಹ್... ಎಂತಾ ಗುಡ್ ನ್ಯೂಸ್ ಮಮ್ಮೀ...' ಎಂದು ತನ್ನ ತಾಯಿಯನ್ನು ತಬ್ಬಿಕೊಂಡರೂ ಲಕ್ಷ್ಮಿಯ ಮನಸ್ಸಿನಲ್ಲಿದ್ದ